**M.V.C.No.1386/2022**
**PW1**

ದಿನಾಂಕ 04.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ಪಿ.ಕೆ.ಪಿ ವಕೀಲರಿಂದಃ

ಈ ಪ್ರಕರಣದಲ್ಲಿ ನಾನು 1ನೇ ಅರ್ಜಿದಾರಳಾಗಿದ್ದು, ನನ್ನ ಹೆಚ್ಚುವರಿ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಪಿ.ಎಂ ರಿಪೋರ್ಟನ್ನು ನಿಪಿ–23 ಎಂದು, ಡಿಸ್ಚಾರ್ಜ್ ಸಮ್ಮರಿಯನ್ನು ನಿಪಿ–24 ಎಂದು, ರೇಷನ್ ಕಾರ್ಡನ್ನು ನಿಪಿ–25 ಎಂದು, ನಾಲ್ಕು ಆಧಾರ್ ಕಾರ್ಡುಗಳನ್ನು ನಿಪಿ–26 ರಿಂದ 29 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಯು.ಎಸ್.ಎನ್ ವಕೀಲರಿಂದಃ

ನನ್ನ ಗಂಡ ಅಪಘಾತವಾದ 4 ವರ್ಷದ ನಂತರ ಮೃತ ಪಟ್ಟಿರುತ್ತಾರೆ. ಅಪಘಾತವಾದ ನಂತರ 4 ವರ್ಷಗಳ ಕಾಲ ಅವರು ಮನೆಯಲ್ಲೇ ಇದ್ದರು. ಆ 4 ವರ್ಷಗಳ ಕಾಲ ನನ್ನ ಗಂಡ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ಅವರನ್ನು ಆಗಾಗ್ಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೆವು. ಮನೆಯಲ್ಲಿದ್ದಾಗ ನನ್ನ ಗಂಡ ಮನೆಯ ಒಳಗೆ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅಪಘಾತದಲ್ಲಿ ಆದ ಗಾಯಗಳು ಅವರ ಮರಣಕ್ಕೆ ಕಾರಣವಾದವುಗಳಲ್ಲ ಎಂದರೆ ಸರಿಯಲ್ಲ. ನನ್ನ ಗಂಡನನ್ನು ನಮ್ಮ ಮನೆಯಿಂದ ಕೆ.ವಿ.ಜಿ ಆಸ್ಪತ್ರೆಗೆ ಕರೆದುಕೊಂಡು ಹೋಗುವ ದಾರಿಯಲ್ಲಿ ಮೃತ ಪಟ್ಟಿರುತ್ತಾರೆ. ನನ್ನ ಗಂಡನಿಗೆ ಮೊದಲು ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದೆವು, ನಂತರ ಕೆ.ವಿ.ಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದೆವು. ನನ್ನ ಗಂಡ ಈಗಾಗಲೇ ತನಗೆ ಆದ ಗಾಯಗಳಿಗಾಗಿ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಯಲ್ಲಿ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಕೆ.ವಿ.ಜಿ ಆಸ್ಪತ್ರೆಯ ವೈದ್ಯರ ಮೇಲೆ

ಪ್ರಭಾವ ಬೀರಿ ನನ್ನ ಗಂಡ ಅಪಘಾತದಲ್ಲಿ ಆದ ಗಾಯಗಳಿಂದ ಮೃತ ಪಟ್ಟಿರುತ್ತಾರೆ ಎಂದು ಸುಳ್ಳು ವರದಿ ತರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–23 ರಲ್ಲಿ ಬರೆದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಗಂಡ ಅಪಘಾತಗಳಿಂದಾದ ಗಾಯಗಳಿಂದ ಮೃತ ಪಟ್ಟಿದ್ದಾಗಿ ನಾನು ಪೊಲೀಸರಿಗೆ ತಿಳಿಸಿರುತ್ತೇನೆ. ನನ್ನ ಗಂಡ ಅಪಘಾತದಲ್ಲಿ ಮೃತ ಪಟ್ಟಿದ್ದಾರೆ ಎಂದು ಪೊಲೀಸರು ಅಂತಿಮ ವರದಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ–23 ನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಉದ್ದೇಶದಿಂದ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ಈ ಅರ್ಜಿ ಸಲ್ಲಿಸಿದ 4 ವರ್ಷದ ನಂತರ ನನ್ನ ಗಂಡ ಮೃತ ಪಟ್ಟಿರುತ್ತಾರೆ. ನನ್ನ ಗಂಡನ ತೀರಿಕೊಳ್ಳುವ ಕಾಲಕ್ಕೆ ಅವರಿಗೆ 65 ವರ್ಷ ಪ್ರಾಯವಾಗಿತ್ತು ಎಂದರೆ ಸರಿಯಲ್ಲ. ನನ್ನ ಗಂಡನ ಪ್ರಾಯದ ಬಗ್ಗೆ ನಾನು ಅವರ ಆಧಾರ್ ಕಾರ್ಡನ್ನು ಹಾಜರು ಪಡಿಸಿದ್ದೇನೆ.

ನನ್ನ ಮಗ ಅವಿನ್ ಬೆಂಗಳೂರಿನ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಅದೇ ರೀತಿ ನನ್ನ 2ನೇ ಮಗ ಕೀರ್ತನ್ ಬೆಂಗಳೂರಿನಲ್ಲಿ ತರಭೇತಿ ಪಡೆಯುತ್ತಿದ್ದಾನೆ. ನನಗೆ ಹೆಣ್ಣು ಮಕ್ಕಳು ಇರುವುದಿಲ್ಲ. ನನ್ನ ಗಂಡು ಮಕ್ಕಳು ನನ್ನ ಗಂಡನ ಆಧಾಯದ ಮೇಲೆ ಅವಲಂಬಿತರಾಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳ ಆಧಾರ ಮೇರೆಗೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(1ನೇ ಎದುರುದಾರರ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ. )

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ